# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1138** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **25.07.2024** |
| **ಉತ್ತರಿಸುವ ಸಚಿವರು.** | : | **ಗೃಹ ಸಚಿವರು.** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಪಿಆರ್‌ಇಡಿ ವಿಭಾಗದಲ್ಲಿ ಹಣ ಅಕ್ರಮ ವರ್ಗಾವಣೆ/ದುರುಪಯೋಗ ಕುರಿತು ಸಿಐಡಿ ನಡೆಸುತ್ತಿರುವ ಪ್ರಕರಣದ ತನಿಖೆ ಪ್ರಸ್ತುತ ಯಾವ ಹಂತದಲ್ಲಿದೆ; ಪ್ರಕರಣದಲ್ಲಿ ಎಷ್ಟು ಹಣ ಅಕ್ರಮ ವರ್ಗಾವಣೆ ಆಗಿರುವುದನ್ನು ಪತ್ತೆ ಹಚ್ಚಲಾಗಿದೆ: (ಸಂಪೂರ್ಣ ವಿವರ ನೀಡುವುದು) | ಪಂಚಾಯತ್ ರಾಜ್ ಇಂಜಿನಿಯರಿಂಗ್ ಮಂಡ್ಯ ವಿಭಾಗದಿಂದ ಅಕ್ರಮವಾಗಿ ಹಣವು ವರ್ಗಾವಣೆ/ ದುರುಪಯೋಗವಾಗಿದೆ ಎನ್ನಲಾದ ಪ್ರಕರಣವನ್ನು ಸಿಐಡಿಯಿಂದ ತನಿಖೆಯನ್ನು ನಡೆಸಲಾಗುತ್ತಿದ್ದು, ಸದರಿ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.<br><br>ತನಿಖಾ ಸಮಯದಲ್ಲಿ ಕಂಡುಬಂದಿರುವ ಸದರಿ ವಿಭಾಗದಿಂದ ಅಕ್ರಮವಾಗಿ ಹಣವು ವರ್ಗಾವಣೆ ಯಾಗಿರುವ ವಿವರಗಳನ್ನು **ಅನುಬಂಧದಲ್ಲಿ ನೀಡಲಾಗಿದೆ**. |
| ಆ) | ಸದರಿ ಪ್ರಕರಣದ ತನಿಖಾ ಭಾಗವಾಗಿ ಈ ವರೆವಿಗೂ ಎಷ್ಟು ಮಂದಿ ಆರೋಪಿಗಳನ್ನು ವಿಚಾರಣೆ/ತನಿಖೆಗೆ ಒಳಪಡಿಸಲಾಗಿದೆ ತನಿಖೆಗೆ ಪೂರಕವಾಗಿ ಎಷ್ಟು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ ಹಾಗೂ ಎಷ್ಟು ವರದಿಗಳನ್ನು ನಿರೀಕ್ಷಿಸಲಾಗಿದೆ: (ಸಂಪೂರ್ಣ ವಿವರ ನೀಡುವುದು) | ಸದರಿ ಪ್ರಕರಣವು ತನಿಖಾ ಹಂತದಲ್ಲಿರುವುದರಿಂದ ತನಿಖಾ ಭಾಗವಾಗಿ ಈವರೆವಿಗೂ ಆರೋಪಿಗಳನ್ನು ವಿಚಾರಣೆ/ತನಿಖೆಗೆ ಒಳಪಡಿಸಿರುವ ಹಾಗೂ ತನಿಖೆಗೆ ಪೂರಕವಾಗಿ ದಾಖಲೆಗಳನ್ನು ವಶಕ್ಕೆ ಪಡೆದಿರುವ ಕುರಿತು ತನಿಖಾ ವರದಿಯನ್ನು ನಿರೀಕ್ಷಿಸಲಾಗಿದ್ದು, ಶ್ರೀ ನಾಗರಾಜು, ಡಿ ಗ್ರೂಪ್ ನೌಕರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಮಂಡ್ಯ ವಿಭಾಗ, ಇವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ತನಿಖೆಗೆ ಪೂರಕವಾಗಿ ಒಟ್ಟು 285 ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ವರ್ಷವಾರು ಆಡಿಟ್ ವರದಿಯನ್ನು ಪಡೆಯುವುದು ಬಾಕಿ ಇರುತ್ತದೆ. |
| ಇ) | ಸದರಿ ಪ್ರಕರಣದ ತನಿಖೆ ವಿಳಂಬವಾಗಲು ಕಾರಣಗಳೇನು? | ಪ್ರಕರಣ ಸಂಬಂಧ 2010 ರಿಂದ 2020 ರವರೆಗೆ ವರ್ಷವಾರು ಆಡಿಟ್ ವರದಿಯನ್ನು ಮತ್ತು ಕರ್ತವ್ಯ ಹಂಚಿಕೆ ಮಾಡಿರುವ ವಿವರವನ್ನು ತ್ವರಿತವಾಗಿ ನೀಡುವಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯಿತಿ ಮಂಡ್ಯ ಇವರುಗಳಿಗೆ ಹಲವು ಪತ್ರಗಳ ವ್ಯವಹಾರ ಮಾಡಲಾಗಿದ್ದು, ಸದರಿ ವಿಭಾಗದಿಂದ ವರದಿ ಬರುವುದು ಬಾಕಿ ಇರುತ್ತದೆ. ಪ್ರಕರಣದ ತನಿಖೆಯನ್ನು ಅಂತಿಮಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: 43 ಎಸ್‌ಡಿಎನ್ 2024

**(ಡಾ: ಜಿ.ಪರಮೇಶ್ವರ)**

ಗೃಹ ಸಚಿವರು

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ:1138ಕ್ಕೆ

# ಅನುಬಂಧ

ಪಂಚಾಯತ್ ರಾಜ್ ಇಂಜಿನಿಯರಿಂಗ್ ಮಂಡ್ಯ ವಿಭಾಗದಿಂದ ಅಕ್ರಮವಾಗಿ ವರ್ಗಾವಣೆಯಾದ ಹಣದ ವಿವರಗಳು

| ಕ್ರ, ಸಂ | ಯಾರಿಂದ | ಯಾರಿಗೆ | ವರ್ಗಾವಣೆಯಾದ (ಜಮೆಯಾದ) ಮೊತ್ತ |
|---|---|---|---|
| 1 | **ಜಿಲ್ಲಾ ಖಜಾನೆಯಿಂದ** ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಲು ಬ್ಯಾಂಕ್ ಆಫ್ ಇಂಡಿಯಾಗೆ ನೀಡಲಾದ ಧನಾದೇಶಗಳು | ಶ್ರೀ ಹೆಚ್.ಎಲ್ ನಾಗರಾಜು, 'ಡಿ' ಗ್ರೂಪ್ ನೌಕರರ ಖಾತೆಗೆ | ರೂ. 47,75,015-00 |
| 2 | **ಜಿಲ್ಲಾ ಖಜಾನೆಯಿಂದ** ಕಾರ್ಮಿಕರ ಕಲ್ಯಾಣ ನಿಧಿಗೆ ಪಾವತಿಸಲು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹೆಸರಿಗೆ ನೀಡಲಾದ ಧನಾದೇಶಗಳು | ಶ್ರೀ ಹೆಚ್.ಎಲ್ ನಾಗರಾಜು, 'ಡಿ' ಗ್ರೂಪ್ ನೌಕರರ ಖಾತೆಗೆ | ರೂ. 19,34,354-00 |
| 3 | ಬ್ಯಾಂಕ್ ಆಫ್ ಇಂಡಿಯಾ ಎಂದು ನಮೂದಿಸಿರುವ ಬ್ಯಾಂಕ್ ಚೆಕ್‌ಗಳು | ಶ್ರೀ ಹೆಚ್.ಎಲ್ ನಾಗರಾಜು, 'ಡಿ' ಗ್ರೂಪ್ ನೌಕರರ ಖಾತೆಗೆ | ರೂ. 56,84,976-00 |
| 4 | ವ್ಯವಸ್ಥಾಪಕರುಗಳ ಪಿ.ಆರ್.ಇ.ಡಿ. ರವರ ಹೆಸರಿನಲ್ಲಿ<br><br>(ಪಿಆರ್‌ಇಡಿ ಕಛೇರಿಯಿಂದ ಸಿದ್ಧಪಡಿಸಿಲ್ಲದ ಧನಾದೇಶಗಳು) | ಶ್ರೀ ಹೆಚ್.ಎಲ್. ನಾಗರಾಜು (ಡಿ ಗ್ರೂಪ್) ರವರಿಗೆ ಕಾರ್ಪೋರೇಷನ್, ಕೆನಾರ, ಪಂಜಾಬ್ ನ್ಯಾಷನಲ್, ಐಡಿಬಿಐ, ಹೆಚ್‌ಡಿಎಫ್‌ಸಿ, ಆಕ್ಸಿಸ್ ಬ್ಯಾಂಕ್‌ಗಳಿಂದ | ರೂ.2,27,31,384-00 |

ಒಟ್ಟು = ರೂ.**3,51,25,729-00**